ದಿನಾಂಕಃ **28.10.2025** ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ ಶ್ರೀ ಕೆ ವಿ ಎಸ್ ವಕೀಲರಿಂದಃ-

ನಾನು ಪದವೀಧರ. ಆರೋಪಿ ನನಗೆ 10 ವರ್ಷಗಳಿಂದ ಪರಿಚಯ. ಆರೋಪಿಯ ತಂದೆ ಹೆಸರು ಏನು ಎಂಬ ಪ್ರಶ್ನೆಗೆ ಸಾಕ್ಷಿ ಆರೋಪಿಯ ತಂದೆ ಹಳೇ ಪೇಟೆಯಲ್ಲಿ ಟೈಲರಿಂಗ್ ಅಂಗಡಿ ಇಟ್ಟುಕೊಂಡಿದ್ದು ನಾನು ಅವರ ಬಳಿ ಬಟ್ಟೆ ಹೊಲಿಸುತ್ತಿದ್ದೆ ಎಂದು ನುಡಿಯುತ್ತಾರೆ. ನಾನು ವ್ಯವಸಾಯ ಮಾಡುತ್ತೇನೆ. ನನಗೆ ಬ್ಯಾಂಕ್ ವ್ಯವಹಾರದ ಬಗ್ಗೆ ಮಾಹಿತಿ ಇದೆ ಎಂದರೆ ಸರಿ. ಆರ್ ಬಿ ಐ ನಿಯಮಗಳ ಪ್ರಕಾರ ರೂ. 20,000 ಕ್ಕಿಂತ ಹೆಚ್ಚಿನ ಮೊತ್ತವನ್ನು ಚೆಕ್ ಮೂಲಕ ಕೊಡಬೇಕು ಎಂದರೆ ಸರಿ. ಆರೋಪಿಯು ಯಾವ ದಿನಾಂಕದಂದು ನಿಮ್ಮ ಬಳಿ ಸಾಲ ಪಡೆದಿರುತ್ತಾರೆ ಎಂದರೆ ಸಾಕ್ಷಿ 2022 ರಲ್ಲಿ ಪಡೆದಿರುತ್ತಾರೆ ಎಂದು ನುಡಿಯುತ್ತಾರೆ. ಆರೋಪಿಯು ರೂ. 2.00 ಲಕ್ಷಗಳನ್ನು ನನ್ನ ಬಳಿ ಸಾಲವಾಗಿ ಪಡೆದಿರುತ್ತಾರೆ. ಆರೋಪಿಯ ಅಂಗಡಿ ಬಳಿ ನಾನು ಸಾಲವನ್ನು ನೀಡಿರುತ್ತೇನೆ. ಆರೋಪಿಗೆ ನಾನು ರೂ. 500 ಮುಖ

ಬೆಲೆಯ 200 ನೋಟುಗಳ ಮೂಲಕ ಸಾಲ ನೀಡಿರುತ್ತೇನೆ. ಆರೋಪಿಗೆ ಸಾಲ ನೀಡುವಾಗ ಬೇರೆ ಯಾರು ಇದ್ದರು ಎಂದು ನನಗೆ ಮರೆತು ಹೋಗಿದೆ. ಆರೋಪಿಗೆ ಸಾಲ ನೀಡಿರುವ ಬಗ್ಗೆ ನನ್ನ ಆದಾಯ ತೆರಿಗೆಯಲ್ಲಿ ವಿವರ ನೀಡಿರುವುದಿಲ್ಲ.

ಆರೋಪಿಯು ನನ್ನ ಬಳಿ ಯಾವ ದಿನಾಂಕದಂದು ಸಾಲ ಕೇಳಿರುತ್ತಾರೆ ಎಂದು ನನಗೆ ಈಗ ಮರೆತು ಹೋಗಿದೆ. ಆರೋಪಿಗೆ ಸಾಲ ಕೊಡುವ ಬಗ್ಗೆ ಈ ಹಿಂದೆ ಮಾತುಕತೆಯಾಗಿರುವುದಿಲ್ಲ. ಆರೋಪಿ ಯಾವಾಗ ಸಾಲ ಹಿಂದಿರುಗಿಸುತ್ತಾನೆ ಎಂಬ ಬಗ್ಗೆ ಮಾತುಕತೆಯಾಗಿತ್ತಾ ಎಂದರೆ ಸಾಕ್ಷಿ ಚೆಕ್ ನೀಡಿದ್ದರು ಎಂದು ನುಡಿಯುತ್ತಾರೆ. ಆರೋಪಿಗೆ ಸಾಲ ಕೊಟ್ಟಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಮಾಡಿರುವುದಿಲ್ಲ. ನನಗೆ ಯಾವುದೇ ಬ್ಯಾಂಕಿನಲ್ಲಿ ಸಾಲ ಇರುವುದಿಲ್ಲ. ನಿಪಿ-1 ರ ಚೆಕ್ಕನ್ನು ಆರೋಪಿಯೇ ಬರೆದಿರುತ್ತಾನೆ. ನಿಪಿ-1 ರಲ್ಲಿ ಬರೆದಿರುವ ಒಕ್ಕಣೆಯ ಶಾಯಿಗೂ ಸಹಿಯಲ್ಲಿರುವ ಶಾಯಿಗೂ ವ್ಯತ್ಯಾಸ ಇದೆ ಎಂದರೆ ನನಗೆ ಗೊತ್ತಿಲ್ಲ. ನಿಪಿ-2 ರ ನೋಟಿಸನ್ನು ಯಾವ ದಿನಾಂಕದಂದು ಆರೋಪಿಗೆ ಜಾರಿ ಮಾಡಿರುತ್ತೇನೆ ಎಂದು ನನಗೆ ಈಗ ನೆನಪಿಲ್ಲ. ನಿಪಿ-5 ರ ದಾಖಲೆಯನ್ನು ನಿಮಗೆ ಯಾರು ನೀಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಮರೆತುಹೋಗಿದೆ ಎಂದು ನುಡಿಯುತ್ತಾರೆ. ನಿಪಿ-5 ರ ದಾಖಲೆ ನನಗೆ ಸಂಬಂಧಿಸಿದ ದಾಖಲೆ ಅಲ್ಲ. ನಿಪಿ-2 ಮತ್ತು 4 ರಲ್ಲಿ ಏನು ಬರೆದಿದೆ ಎಂದರೆ ಸಾಕ್ಷಿ ಬಹಳ ವರ್ಷಗಳಾದ ಕಾರಣ ಮರೆತುಹೋಗಿದೆ ಎಂದು ನುಡಿಯುತ್ತಾರೆ. ಆರೋಪಿ ನನಗೆ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಗೂ ನಿಮಗೂ ಯಾವುದೇ ಸಂಬಂಧ ಇಲ್ಲಾ ಎಂದರೆ ಸಾಕ್ಷಿ ಆರೋಪಿ ನನಗೆ ಹಿಂದಿನಿಂದಲೂ ಪರಿಚಯ ಎಂದು ನುಡಿಯುತ್ತಾರೆ. ಆರೋಪಿಯು ನಾರಾಯಣಪ್ಪ ಬಿನ್ ರಂಗಪ್ಪ ರವರಿಗೆ ನಿಪಿ-1 ರ ಖಾಲಿ ಚೆಕ್ಕು ಹಾಗೂ ಅದೇ ಬ್ಯಾಂಕಿನ 052855 ರ ಖಾಲಿ ಚೆಕ್ಕನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ನಾನು ಬಿ ಪಿ ಎಲ್ ಕಾರ್ಡ ಹೊಂದಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಪಡಿತರ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲಾ ಎಂದರೆ ಸರಿ.

<u>( ಮುಂದುವರೆದ ಪಾಟೀ ಸವಾಲಿಗಾಗಿ ಸಮಯಕೋರಿದ್ದು ರೂ. **1,000** ಗಳ ಖರ್ಚಿನೊಂದಿಗೆ ಮುಂದೂಡಲಾಯಿತು )</u>

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ

Sd/-
3 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ:ದ:ನ್ಯಾ:ದಂ.,ರವರು, ಕಡೂರು.